ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ. ಲೇಖನ-ಸುದ್ದಿ ಕಳುಹಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮ ದನಿಯನ್ನಾಗಿಸಿಕೊಳ್ಳಿ.

ಸಂಪುಟ: 4 ಸಂಚಿಕೆ: 2-3, 5, ಫೆಬ್ರವರಿ 1980 ಪಾಕ್ಷಿಕ ಬೆಲೆ: 20 ಪೈಸೆ

ವಾರ್ಷಿಕ ಚಂದಾ 5 ರೂ. ಗಳು

ಗಣರಾಜ್ಯೋತ್ಸವ ವಿರುದ್ಧ ದ. ಸಂ. ಸ. ಪ್ರತಿಭಟನೆ

ದೇಶದುದ್ದಗಲಕ್ಕೂ ರಾಜಕಾರಣಿಗಳು ಜನವರಿ 26ರಂದು ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿದ್ದಾಗ ಕರ್ನಾಟಕ ದಲಿತ ಸಂಘರ್ಷ ಸಮಿತಿ ಬೆಂಗಳೂರು ಕಾರ್ಯಕರ್ತರು ಗಣರಾಜ್ಯೋತ್ಸವಕ್ಕೆ ತಮ್ಮ ತೀವ್ರ ಪ್ರತಿಭಟನೆ ಸೂಚಿಸಿದರು.

ದಲಿತರು ಇನ್ನೂ ಬಡತನದ ರೇಖೆ ಕೆಳಗಿದ್ದು ಬದುಕಲಾಗದ ಸ್ಥಿತಿಯಲ್ಲಿರುವ ಅವರ-ನೋವು ದುಃಖ-ದುಮ್ಮಾನ ಪ್ರತಿನಿಧಿಸಲು ಸಂಘರ್ಷ ಸಮಿತಿ ಕಾರ್ಯಕರ್ತರು ಬಾಯಿಗೆ ಕರಿಬಟ್ಟೆ ಬಿಗಿದು ಬೆಂಗಳೂರಿನಲ್ಲಿ ಮೌನ ಮೆರವಣಿಗೆ ನಡೆಸಿದರು.

ಶಿವಾಜಿನಗರ ಸ್ಟೇಡಿಯಂನಿಂದ ಹೊರಟ ಮೌನ ಮೆರವಣಿಗೆಯು ಫ್ರೇಜರ್ ಟೌನ್‌ನಲ್ಲಿರುವ ಡಾ॥ ಬಿ. ಆರ್. ಅಂಬೇಡ್ಕರ್ ಅವರ ಪ್ರತಿಮೆ ಇರುವ ಸ್ಥಳ ತಲುಪಿ ಗಣರಾಜ್ಯೋತ್ಸವಕ್ಕೆ ಧಿಕ್ಕಾರ ಹಾಕಿದರು.



ದಿನನಿತ್ಯ ದೌರ್ಜನ್ಯ-ದಬ್ಬಾಳಿಕೆಗೆ ಬಲಿಯಾಗುತ್ತಿರುವ ದಲಿತರಿಗೆ ಗೌರವ ಸೂಚಿಸಲು ಕಾರ್ಯಕರ್ತರು ಅಂಬೇಡ್ಕರ್ ಪ್ರತಿಮೆ ಕೆಳಗೆ ಒಂದು ನಿಮಿಷ ಮೌನ ಆಚರಿಸಿದರು.

ದಲಿತರ ಬದುಕನ್ನು ಹೇಳುವ ಕ್ರಾಂತಿಕಾರಿ ಹಾಡುಗಳನ್ನು ಹಾಡುವ ಮೂಲಕ ಆರಂಭವಾದ ಸಭಾರಂಭದ ಅಧ್ಯಕ್ಷತೆಯನ್ನು ದ. ಸಂ. ಸಂ. ಕಾರ್ಯಕರ್ತ ಎನ್. ವೆಂಕಟೇಶ್ ವಹಿಸಿದ್ದರು. (6ನೇ ಪುಟ ನೋಡಿ)

ಖಾನಪುರ : ದಲಿತ ಯುವಕನ ಕೊಲೆ

ರಾಯಚೂರು ತಾಲ್ಲೂಕಿನ ಖಾನಪೂರದ ದಲಿತ ಯುವಕ ಖಾನಪೂರದಯ್ಯ ಎಂಬಾತನನ್ನು ಸವರ್ಣೀಯ ಬೇಡರು ಕಳೆದ ಡಿಸೆಂಬರ್ 2ರಂದು ಅಮಾನುಷವಾಗಿ ಹೊಡೆದು ಕೊಂದಿದ್ದಾರೆ.

ಕುಲಕಸುಬುಗಳನ್ನು ಬಿಟ್ಟಿದ್ದಕ್ಕಾಗಿ ಬೇಡರು ದಲಿತರ ಮೇಲೆ ಕತ್ತಿಮಸೆಯುತ್ತಿದ್ದ ಹಗೆತನ

(7ನೇ ಪುಟ ನೋಡಿ)

ದಲಿತರ ಮೇಲೆ ಹಲ್ಲೆ: ತುಮಕೂರು ಜಿಲ್ಲಾಧಿಕಾರಿ ಕುಮ್ಮಕ್ಕು

[ಪಂಚಮ ವಿಶೇಷ ಪ್ರತಿನಿಧಿಯಿಂದ]

ಕೋಲಾರಕ್ಕೆ ಸುಮಾರು ಮೂರ್ನಾಲ್ಕು ಮೈಲಿ ದೂರದಲ್ಲಿರುವ ಕುಂಬಾರಳ್ಳಿಯಲ್ಲಿರುವ ಆರು ಕುಟುಂಬಗಳ ದಲಿತರು ಈಗ ಜೀವ ಹಿಡಿದು ಬದುಕುತ್ತಿದ್ದಾರೆ. ಯಾವ ಘಳಿಗೆಯಲ್ಲಿ ತಮ್ಮ ಮೇಲೆ ದೌರ್ಜನ್ಯ ನಡೆಯುವುದೋ ಎಂಬ ಹೆದರಿಕೆ ಅವರನ್ನು ಆವರಿಸಿದೆ.

ದಲಿತರಿಗೆ ಭಯ ಒಡ್ಡಿರುವವರು ಮುಂದುವರೆದ ಸವರ್ಣೀಯರಲ್ಲ. ಪರಿಶಿಷ್ಟ ವರ್ಗಕ್ಕೇ ಸೇರಿದ ಭೋವಿಗಳು. ಸುಮಾರು 45 ಕುಟುಂಬಗಳಷ್ಟಿರುವ ಇವರು ಕುಂಬಾರಳ್ಳಿಯಲ್ಲೇ ಬಹುಸಂಖ್ಯಾತರು, ಪ್ರಬಲರೂ ಆಗಿದ್ದಾರೆ.

ಜನವರಿ 29 ರಂದು ಬೆಳಿಗ್ಗೆ ಕೂಲಿಗೆಂದು ಹೊರಟ್ಟಿದ್ದ ದಲಿತರಿಬ್ಬರಿಗೆ ಅಮಾನುಷವಾಗಿ ಹೊಡೆದಿದ್ದರು. ಊರಿನಿಂದ ಹೊರಕ್ಕೆ ಕಾಲ್ತೆಗೆದರೆ ಸಿಕ್ಕ ಸಿಕ್ಕ ಕಡೆ ಹೊಡೆತ-ಬಡಿತ. ಸಾರ್ವಜನಿಕ ಬಾವಿಯಲ್ಲೂ ನೀರುತೆಗೆಯಲೂ ತಡೆ,

(2ನೇ ಪುಟ ನೋಡಿ)

ದಲಿತ ನುಡಿ

ಮಾನವೀಯತೆಯಿಲ್ಲದೆ ಹೆಣಗಳ ಮೇಲೆ ಅಧಿಕಾರ ವ್ಯಾಮೋಹದ ಪಿಶಾಚಿಗಳು ವೈಭವದಿಂದ ನರ್ತಿಸುತ್ತಿವೆ. ನೋಡುತ್ತಾ ಇನ್ನೂ ಎಷ್ಟು ಕಾಲ ಸಹಿಸುವಿರಿ.

—ಬೋಯಿ ಭೀಮನ್ನ

'ಪಂಚಮ' ಪ್ರತಿ ಕಾಯುವಂತೆ ಮಾಡಿ

ಮಾನ್ಯರೆ,

ಪಂಚಮ ಪತ್ರಿಕೆ ತಪ್ಪದೆ ನೋಡುತ್ತಿದ್ದೇನೆ. ತಾವು ಪಂಚಮದ ಮೂಲಕ ದಲಿತ ಸಂಘಟನೆ ಮಾಡುತ್ತಿರುವುದು ಸಂತೋಷ. ಹಿಂದಿನ ಒಂದೆರಡು ವರ್ಷಗಳಲ್ಲಿ ಪಂಚಮ ಇನ್ನಷ್ಟು ಆಸಕ್ತಿ ಬೆಳೆಸುತ್ತಿತ್ತು. ಆದ್ದರಿಂದ ಪಂಚಮದ ಪ್ರತಿ ಕಾಯುವಂತೆ ಮಾಡಲು ಪ್ರಯತ್ನಿಸಿ, ಪಂಚಮ ಜನಪ್ರಿಯವಾಗುವಂತೆ ಅಂದರೆ ಕೊನೇಪಕ್ಷ ದಲಿತರು ತಪ್ಪದೇ ಓದುವಂತೆ ಸ್ವಲ್ಪ ಪ್ರಚಾರ ಕಾರ್ಯವನ್ನು ಮಾಡಿ. ಕರ್ನಾಟಕದ ಪತ್ರಿಕೋದ್ಯಮದ ಇತಿಹಾಸದಲ್ಲಿ ಪಂಚಮಕ್ಕೆ ಒಂದು ಸ್ಥಾನ ಸಲ್ಲುತ್ತದೆ.

—ಬಾ. ಸಾಮುಗಮಲ್ಪೆ
ನೆಹರೂ ವಿಶ್ವವಿದ್ಯಾಲಯ,
ನವದೆಹಲಿ-67

ತಾತಗುಣಿ ದಲಿತ ಕಾರ್ಮಿಕರ ಹೋರಾಟದಲ್ಲಿ ಪಾಲ್ಗೊಳ್ಳಿ

ಮಾನ್ಯರೆ.

ದೇವಿಕಾರಾಣಿ ಮತ್ತು ರೋರಿಚ್ ಕಲಾವಿದರ ಶೋಷಣೆಯ ವಿರುದ್ಧ ಹೋರಾಟದ ಮೂಲಕ ನ್ಯಾಯಬದ್ಧ ವೇತನ, ಸವಲತ್ತುಗಳನ್ನು ನೀಡಬೇಕೆಂದು ಒತ್ತಾಯಿಸಿ ತಾತಗುಣಿ ದಲಿತ ಕಾರ್ಮಿಕರು ಕಳೆದ ಡಿಸೆಂಬರ್ 5ರಿಂದ ವಿಧಾನಸೌಧದ ಮುಂದೆ ಧರಣಿ ನಡೆಸುತ್ತಿದ್ದು ಇನ್ನೂ ಪರಿಹಾರ ಕಾಣದಿರುವುದು ದುಃಖಕರ ವಿಷಯ.

ಬೆಂಗಳೂರು ಜಿಲ್ಲೆ ರೈತಸಂಘದ ನೇತೃತ್ವದಲ್ಲಿ ಸಂಸಾರ ಸಮೇತ ಧರಣಿಯಲ್ಲಿ ಪಾಲ್ಗೊಂಡಿರುವ

ಪತ್ರಗಳು

ಈ ಕಾರ್ಮಿಕರ ಹೋರಾಟಕ್ಕೆಪ್ರಗತಿಪರ ಸಂಘಟನೆಗಳು ಅಷ್ಟೇನು ಆಸಕ್ತಿ ತೋರದಿರುವುದು ವಿಷಾದದ ಸಂಗತಿ.

ದಲಿತರ ಈಗಿನ ದುಸ್ಥಿತಿಯ ಬದುಕನ್ನು ಮೂಲಭೂತವಾಗಿ ಬದಲಿಸಬೇಕೆಂದು ರಾಜ್ಯಾದ್ಯಂತ ಹೋರಾಟ ನಡೆಸುತ್ತಿರುವ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯುಸಕ್ರಿಯವಾಗಿಪಾಲ್ಗೊಂಡು ಕಾರ್ಮಿಕರ ಹೋರಾಟ ಯಶಸ್ವಿಗೊಳ್ಳಲು ನೆರವಾಗಬೇಕೆಂದು ಕೋರುವೆ.

—ಶ್ರೀನಿವಾಸ ಮೂರ್ತಿ
ಬೆಂಗಳೂರು

ದಲಿತರ ಮೇಲೆ ಹಲ್ಲೆ : ಜಿಲ್ಲಾಧಿಕಾರಿ ಕುಮ್ಮಕ್ಕು

[ಒಂದನೇ ಪುಟದಿಂದ]

ಅಂಗಡಿಗಳಲ್ಲಿ ಸಾಮಾನುಗಳನ್ನು ನೀಡುವುದಿಲ್ಲ. ಭೋವಿಗಳ ದರ್ಪ ದೌರ್ಜನ್ಯ ಎಷ್ಟಾಗಿದೆ ಎಂದರೆ ಊರಿನ ಹೊರಗೆ ಹೋಗದಂತೆ ದಲಿತರನ್ನು ಅವರವರ ಮನೆಯೊಳಗೆ ಕೂಡಿಹಾಕಿ ಬೀಗವನ್ನು ಹಾಕಿಬಿಡುವುದಾಗಿ ಬೆದರಿಕೆ.

ಮೌನವೇ ಅಪರಾಧ

ದಲಿತರ ಮೇಲಿನ ದೌರ್ಜನ್ಯಕ್ಕೆ ಕಾರಣಗಳು ಇವು: ಶ್ಯಾಮರಹಳ್ಳಿ ರೆಡ್ಡೆಪ್ಪ ಎಂಬಾತನ ಸುಮಾರು 15 ಎಕರೆ ಜಮೀನನ್ನು ಕುಂಬಾರಳ್ಳಿಯ ಎಲ್ಲ ಜಾತಿ ಜನರೂ ಕಳೆದ 10 ವರ್ಷಗಳಿಂದ ಗೇಣಿ ಮಾಡುತ್ತಾ ಬಂದಿದ್ದಾರೆ. ರೆಡ್ಡೆಪ್ಪ ಈಗ ಆ ಜಮೀನನ್ನು ಮಾರಿಬಿಡಲು ನಿರ್ಧರಿಸಿದ್ದಾನೆ. ಗೇಣಿ ಮಾಡುತ್ತಿರುವ ತಮಗೇ ಜಮೀನು ಕೊಡಬೇಕೆಂದು ಕುಂಬಾರಳ್ಳಿ ಜನರ ಹಟ. ಈ ಸಂಬಂಧದಲ್ಲಿ ರೆಡ್ಡೆಪ್ಪನಿಗೂ ಕುಂಬಾರಳ್ಳಿ ಜನರಿಗೂ ಕತ್ತಿಮಸೆಯುವ ವೈಷಮ್ಯ.

ಬಡತನ-ಅಜ್ಞಾನದಲ್ಲಿ ಅರೆ ಬರೆ ಬದುಕನ್ನು ಸಾಗಿಸುತ್ತಿರುವ ದಲಿತರು ಏನೂ ಮಾಡಲಾಗದ ಸ್ಥಿತಿಯಲ್ಲಿ ಮೌನಿಗಳಾಗಿದ್ದಾರೆ. ಇವರ ಮೌನವೇ ಭೂ ಒಡೆಯ ರೆಡ್ಡೆಪ್ಪನಿಗೆ ಬೆಂಬಲ ಎಂದು ಭಾವಿಸಿರುವ ಭೋವಿಗಳು ದಲಿತರ ಮೇಲೆ ನಿರಂತರ ದೌರ್ಜನ್ಯ ನಡೆಸಲು ತೊಡಗಿದ್ದಾರೆ.

ದಲಿತರ ಮೇಲಿನ ಈ ದೌರ್ಜನ್ಯ ತಿಳಿದು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರೊಬ್ಬರೊಡನೆ ಅಲ್ಲಿಗೆ ಹೋದಾಗ ಕಂಡದ್ದು ಅಳಲಿನಲ್ಲಿದ್ದ ದಲಿತರು.

ಗಳಗಳನೆ ಅತ್ತರು

ದಲಿತರ ಮನೆಯೊಂದಕ್ಕೆ ಕಾಲಿಟ್ಟಾಗ ಹೆಂಗಸರು ಮಕ್ಕಳಾದಿಯಾಗಿ ಗುಂಪು ಸೇರಿ ಬೆಳಿಗ್ಗೆ ನಡೆದಿದ್ದ ದೌರ್ಜನ್ಯದ ಘಟನೆ ಹೇಳುತ್ತಾ ಗಳಗಳನೆ ಅತ್ತರು.

ಮಲಗಲು ಚಾಪೆಯೂ ಇಲ್ಲದ ಆ ಮನೆಯವರು ಚಿಂದಿದುಗಟಿಯನ್ನೇ ಒತ್ತಾಯದಿಂದ ಹಾಸಿ ನಮ್ಮನ್ನು ಕೂರಿಸಿ ತಮ್ಮ ಅಳಲನ್ನು ತೋಡಿಕೊಳ್ಳಲಾರಂಬಿಸಿದರು.

ದಲಿತರ ಮೇಲಿನ ದೌರ್ಜನ್ಯಕ್ಕೆ ಕರೆಕೊಡುವವರು ತುಮಕೂರಿನ ಜಿಲ್ಲಾಧಿಕಾರಿ ಮುನಿಸ್ವಾಮಿ. ಕುಂಬಾರಳ್ಳಿಯವರಾದ ಮುನಿಸ್ವಾಮಿ ಭೋವಿ ಜಾತಿಗೆ ಸೇರಿದವರು.

ಭೋವಿಗಳ ಆಡಳಿತದಲ್ಲಿರುವ ಆ ಊರಿನ ಸಮತಾ ರೈತಸಂಘದವರು ದಲಿತರಾದ ತೋಟಿ ಸೋಡಪ್ಪ ಮತ್ತು ವೆಂಕಟಪ್ಪ ಎಂಬುವವರಿಗೆ ಹೊಡದಿದ್ದರು. ಹೊಡೆತ ತಿಂದ ಅವರು ನ್ಯಾಯಕ್ಕಾಗಿ ದೌರ್ಜನ್ಯಕ್ಕೆ ಕುಮ್ಮಕ್ಕು ಕೊಟ್ಟಿದ್ದ ಜಿಲ್ಲಾಧಿಕಾರಿ ಮುನಿಸ್ವಾಮಿಯವರನ್ನು ಕಾಣಲು ತುಮಕೂರಿಗೆ ಹೋಗಿದ್ದರು.

'ಎಲ್ಲಾ ಬುದ್ಧಿಯೋರು ಹೇಳ್ದಂಗೆ'

ದೌರ್ಜನ್ಯ ನಡೆಸಿದ ಭೋವಿಗಳ ಕೇರಿಗೆ ಹೋಗಿ ಮಾತನಾಡಿದಾಗ "ಅವ್ರು ನಾವು ಎಲ್ಲಾ ಒಂದೆ ಅಲ್ವ, ನಾವೆಲ್ಲ ಚೆನ್ನಾಗೇ ಇದ್ದೀವಿ. ಏನೇ ನಡೆದರೂ ಅದೆಲ್ಲ ನಂಮನೆವ್ಯವಾರ" ಎಂದ ಅವರು ನಾವೇನ್ ಸ್ವಾಮಿ ಎಲ್ಲಾ ನಂಬುದ್ದಿಯೋರು (ಮುನಿಸ್ವಾಮಿ) ಹೇಳ್ದಂಗೆ ನಡಕೋತಿವಿ" ಅಂದರು.

ಭೋವಿಗಳಿಗೆ ಸರಿಯಾಗಿ ಬುದ್ಧಿ ಹೇಳಿ ಕೋಲಾರಕ್ಕೆ ಹೊರಟಾಗ ದಲಿತ ಮಹಿಳೆಯೊಬ್ಬಳು ನಮ್ಮತ್ತ ಓಡಿಬಂದು "ನಾವಿಲ್ಲಿ ಬದ್ಕೋ ಅಂಗಿಲ್ಲ ಎಂಗಾದ್ರೂ ನಮ್ಗೆ ಆಸ್ರೆ ಕೊಡ್ರಿ ಸ್ವಾಮಿ" ಎಂದು ಕಣ್ಣೀರಿಟ್ಟಳು.

ದಲಿತ ಸಂಘರ್ಷ ಸಮಿತಿ ಕೋಲಾರ ಶಾಖೆ ಈಗ ದಲಿತರಿಗೆ ಬೆಂಬಲವಾಗಿ ನಿಂತಿದೆ.

ಯಶಸ್ವಿಯಾದ ಹೊನ್ನಾಳಿ ದಲಿತರ ಹೋರಾಟ

[ಪಂಚಮ ಪ್ರತಿನಿಧಿ]



ಅಧಿಕಾರಿಗಳು ದಲಿತರ ಕೂಗಿಗೆ ಕಿವಿಗೊಡದಿದ್ದಾಗ ಜನವರಿ 17 ರಂದು ತಾಲ್ಲೂಕು ಕಚೇರಿ ಮುಂದೆ ದ.ಸಂ.ಸ. ಕಾರ್ಯಕರ್ತ ಟಿ. ರಾಜಣ್ಣ ಆಮರಣಾಂತ ಉಪವಾಸ ಮುಷ್ಕರ ಕೈಗೊಂಡಿದ್ದರು. ಮುಷ್ಕರದಲ್ಲಿ ರಾಜ್ಯ ದ. ಸಂ. ಸ. ಸಂಚಾಲಕ ಬಿ. ಕೃಷ್ಣಪ್ಪನವರೂ ಪಾಲ್ಗೊಂಡಿದ್ದರು.

ಶಿವಮೊಗ್ಗ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಶಾಖೆಯು ಇತ್ತೀಚೆಗೆ ಭೂಹೀನ ಬಡರೈತರಿಗೆ ಸಾಗುವಳಿ ಚೀಟಿ ಕೊಡಲು ಸರ್ಕಾರವನ್ನು ಒತ್ತಾಯಿಸಲು ತಾಲ್ಲೂಕು ಆಫೀಸಿನ ಮುಂದೆ ಧರಣಿ ಹೂಡಿದ್ದಿತು.

ಈ ತಾಲ್ಲೂಕಿಗೆ ಸೇರಿದ 9 ಹಳ್ಳಿಯ 630 ಕುಟುಂಬಗಳು ಹತ್ತನ್ನೆರಡು ವರ್ಷಗಳಿಂದ 1700 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿರುವವು. ಆದರೂ ಈ ತನಕ ಅವರಿಗೆ ಸಾಗುವಳಿ ಚೀಟಿ ದೊರೆತಿರಲಿಲ್ಲ. ಅಧಿಕಾರಿಗಳು ಈ ಬಡ ರೈತರ ಬೇಡಿಕೆಗಳನ್ನೂ ನಿರ್ಲಕ್ಷಿಸಿದರು. ಈ ಸಮಯದಲ್ಲಿ ಸಾಗುವಳಿ ಚೀಟಿ ದೊರಕದೆ ಕಂಗಾಲಾಗಿದ್ದ ಬಡ ರೈತರನ್ನು ದ. ಸಂ. ಸ. ಸಂಘಟಿಸಿ ತಾಲ್ಲೂಕು ಕಚೇರಿ ಮುಂದೆ ಧರಣಿ ಉಪವಾಸ ಆರಂಭಿಸಿತು.

ಎಲ್ಲಾ ಜಾತಿಗೆ ಸೇರಿದ ಬಡ ರೈತರ ನ್ಯಾಯವಾದ ಹೋರಾಟದ ಕಡೆ ಮುಂವಗಾಮಿ ಅಧಿಕಾರಿಗಳು ಗಮನ ಕೊಡಲಿಲ್ಲ. ಧರಣಿ ಸತ್ಯಾಗ್ರಹವನ್ನು ಅಮರಣಾಂತ ಉಪವಾಸಕ್ಕೆ ಪರಿವರ್ತಿಸಲಾಯಿತು. ಇದರಿಂದ ವಾತಾವರಣ ತೀವ್ರವಾಗ ತೊಡಗಿ ಬಡ ರೈತರ ನ್ಯಾಯವಾದ ಬೇಡಿಕೆಗೆ ಮಣಿದು ಸಂಬಂಧಪಟ್ಟ ಅಧಿಕಾರಿಗಳು ಜನವರಿ 17 ರಂದು ಒಂದು ತೀರ್ಮಾನದಂತೆ ಎರಡು ತಿಂಗಳೊಳಗಾಗಿ ಸಾಗುವಳಿ ಚೀಟಿ ಕೊಡಲು ಒಪ್ಪಿಕೊಂಡಿರುವರು. ○

ದಲಿತರ ಭೂಮಿ ಅಕ್ರಮಣ ಸಂಚು

ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಹಿರಿಕಾಳ ಗ್ರಾಮದಲ್ಲಿ ಕೂಲಿಗಾರ 16 ದಲಿತ ಭೂಹೀನ ಕುಟುಂಬಗಳು ವಾಸಿಸುತ್ತಿವೆ. ಇವರು ಇದೇ ಗ್ರಾಮದಲ್ಲಿರುವ 220 ಎಕರೆ ಪೈಸಾರಿ ಜಮೀನನ್ನು ಭೂಹೀನರಾದ ನಮಗೆ ಮಂಜೂರು ಮಾಡಿಕೊಡಬೇಕೆಂದು 1968 ರಿಂದಲೂ ಸಂಬಂಧಪಟ್ಟ ಮಂತ್ರಿಗಳು ಮತ್ತು ಅಧಿಕಾರಿಗಳಿಗೆ. ನೂರಾರು ಅರ್ಜಿಗಳನ್ನು ಕೊಟ್ಟಿದ್ದು, ತಹಸಿಲ್ದಾರ್ ಆಫೀಸು, ರೆವಿನ್ಯೂ ಆಫೀಸುಗಳಿಗೆ ಅಲೆದೂ ಅಲೆದೂ ಅಧಿಕಾರಿಗಳಿಂದ ನಿರ್ಲಕ್ಷ್ಯಕ್ಕೊಳಗಾಗಿರುವರು.

ಅರ್ಜಿಕೊಟ್ಟಿರುವ ಕುಟುಂಬಗಳ ಪೈಕಿ ಕೆಲವರಿಗೆ 1970 ಮತ್ತು 74 ರಲ್ಲಿ ಜಮೀನು ಮಂಜೂರಾಗಿದ್ದು ಈ ಬಗ್ಗೆ ತಾಲ್ಲೂಕು ಕಚೇರಿಯ ರೆಕಾರ್ಡುಗಳಲ್ಲಿ ದಾಖಲೆ ಇದೆ. ಆದರೆ ಇದುವರೆಗೂ ಜಮೀನು ಮಂಜೂರಾಗಿರುವ ವಿಷಯವನ್ನೇ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುವುದಿಲ್ಲ.

"ದೌರ್ಜನ್ಯದ ರಾಣಿ" ವಿರುದ್ಧ ಪ್ರತಿಭಟಿಸಿ ದ. ಸಂ. ಸ. ಕಾರ್ಯಕರ್ತರ ಬಂಧನ ಬಿಡುಗಡೆ

ತಾತಗುಣಿ ಎಸ್ಟೇಟ್ ದಲಿತ ಕಾರ್ಮಿಕರಿಗೆ ನ್ಯಾಯಬದ್ಧ ವೇತನ-ಸವಲತ್ತುಗಳನ್ನು ನೀಡದೆ ಹಲವಾರು ವರ್ಷಗಳಿಂದ ಕಾರ್ಮಿಕರ ರಕ್ತ ಹೀರಿ ನಿರಂತರ ಶೋಷಣೆ ಮಾಡುತ್ತಿರುವ ಎಸ್ಟೇಟ್ ಒಡತಿ ದೇವಿಕಾರಾಣಿ ಬೆಂಗಳೂರಿನಲ್ಲಿ ಜನವರಿ 3 ರಂದು ಫಿಲ್ಮೋತ್ಸವ ಉದ್ಘಾಟಿಸುವುದನ್ನು ದಲಿತ ಸಂಘರ್ಷ ಸಮಿತಿ ಬೆಂಗಳೂರು ಕಾರ್ಯಕರ್ತರು ಪ್ರತಿಭಟಿಸಲು ನಿಷೇಧಾಜ್ಞೆ ಉಲ್ಲಂಘಿಸಿ ಬಂಧನಕ್ಕೊಳಗಾಗಿದ್ದರು.

ಪ್ರಕ್ಷುಬ್ಧ ವಾತಾವರಣವಿದ್ದ ಕಪಾಲಿ ಚಿತ್ರಮಂದಿರದ ಮುಂಭಾಗ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಜನರ ಗುಂಪನ್ನು ಸೀಳಿಕೊಂಡು ದೇವಿಕಾರಾಣಿ ವಿರುದ್ಧ "ದೇವಿಕಾರಾಣಿ ದೌರ್ಜನ್ಯದ ರಾಣಿ" "ದಲಿತ ವಿರೋಧಿ ದೇವಿಕಾರಾಣಿ" ಎಂಬ ಘೋಷಣೆ ಕೂಗಿ ಕರಪತ್ರ ಮತ್ತು ಕಪ್ಪು ಬಾವುಟ ತೂರಿದಾಗ ಶೋಷಕರ ಹಿತ ಕಾಯಲು ಜಾರಿಗೆ ತಂದಿದ್ದ ನಿಷೇದಾಜ್ಞೆ ಉಲ್ಲಂಘನೆ ಮೇಲೆ ಪೋಲೀಸರು ಬಂಧಿಸಿದರು.

ಇನ್ನೂ ಪರಿಹಾರ ಕಾಣದಿರುವ ನೂರಾರು ದಲಿತ ಕಾರ್ಮಿಕ ಕುಟುಂಬಗಳವರು ಬೆಂಗಳೂರು ಜಿಲ್ಲಾ ರೈತಸಂಘದ ನೇತೃತ್ವದಲ್ಲಿ ಡಿಸೆಬರ್ 5 ರಿಂದ ವಿಧಾನಸೌಧದ ಮುಂದೆ ಧರಣಿ ನಡೆಸುತ್ತಿದ್ದಾರೆ.

ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ರೈತಸಂಘ, ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಮುಂತಾದಪ್ರಗತಿಪರಸಂಘಸಂಸ್ಥೆಗಳ ಕಾರ್ಯಕರ್ತರು ದೇವಿಕಾರಾಣಿ ವಿರುದ್ಧ ಪ್ರತಿಭಟಿಸಿ ಬಂಧನಕ್ಕೊಳಗಾಗಿದ್ದರು.

ಸುಮಾರು 80 ಜನರನ್ನು ಬಂಧಿಸಿದ್ದ ಪೋಲೀಸರು ಅಂದು ರಾತ್ರಿಯೇ ಬಿಡುಗಡೆ ಮಾಡಿದರು.

ರಾಷ್ಟ್ರ ಸಮಾಜವಾದದ ಬಗೆಗೆ ಡಾ|| ಬಿ

(ಕಳೆದ ಸಂಚಿಕೆಗಳಿಂದ)

ಮೂಲಭೂತ ಸಮಸ್ಯೆಗಳು :

ಈ ಹೊತ್ತಿನ ಸಂವಿಧಾನಾತ್ಮಕ ಪಜಾಪ್ರಭುತ್ವದಲ್ಲಿ ವ್ಯಕ್ತಿ ಸ್ಥಿರ ಆಸ್ತಿ ಹೊಂದಿರಬೇಕು ಎಂಬ ರಾಜಕೀಯ ಸಂಬಂಧವಾದ ಹಕ್ಕನ್ನು ತೆಗೆದುಹಾಕದೇ ಇದ್ದರೂ ಅದನ್ನು ಶಿಥಿಲಗೊಳಿಸಬೇಕಾದುದು ಅವಶ್ಯಕವೇ ಆಗಿರುವುದು:- ಯಾಕೆಂದರೆ ಇವರ ಪ್ರಕಾರವಾಗಿಯೇ ನಿರುದ್ಯೋಗಿಗಳಿಗೆ ಮೂಲಭೂತ ಹಕ್ಕುಗಳು ಎಂಬುವು ಬೆಲೆಯಿಲ್ಲದವುಗಳು. ಅಂಬೇಡ್ಕರ್ ಅವರು ಮುಂದುವರಿದು ವಿವರಿಸುವರು: ಒಟ್ಟು ನಿರುದ್ಯೋಗಿಗೆ ಯಾವುದಾದರೂ ಒಂದಿಷ್ಟು ಸಂಬಳ ತರುವ ಕೆಲಸವನ್ನೂ ಅಥವಾ ಯಾವುದಾದರೂ ಒಂದು ಯೂನಿಯನ್ನಿಗೆ ಸೇರಿಕೊಂಡು ಮಾತನಾಡುವ, ಸಂಘ ಸಂಸ್ಥೆಯನ್ನು ಕಟ್ಟುವ ಧಾರ್ಮಿಕತೆಯನ್ನು ಬೆಳಸಿಕೊಳ್ಳುವ ಸ್ವಾತಂತ್ರ್ಯವನ್ನು ಮುಂದಿಟ್ಟಾಗ-ಆತ ಸಂಬಳ ತರುವ ಕೆಲಸವನ್ನೂ ನಿಜವಾಗಿ ಆಯ್ದುಕೊಳ್ಳುವನು. ಈಗಲ್ಲದೆ ಆತ ಮತ್ತೇನನ್ನು ಮಾಡಲು ಸಾಧ್ಯ ? ಯಾಕೆಂದರೆ ಕೆಲಸವಿಲ್ಲದಿದ್ದರೆ; ಹಸಿವಿನಿಂದಿರಬೇಕಾಗುತ್ತದೆ. ಮನೆಯಿಲ್ಲದ ಮಕ್ಕಳಿಗೆ ಓದು ಬರಹವಿಲ್ಲದ ಹೀಗೆ ಅನೇಕ ತೆರನಾದ 'ಇಲ್ಲ'ವೆಂಬ ಭಯಗಳ ಹೊರೆಯನ್ನು ಆತ ಹೊರಬೇಕಾಗುತ್ತದೆ. ಈ ವಿಷಯಗಳು ಅಷ್ಟು ಪ್ರಭಾವಶಾಲಿಗಳಾಗಿರುವುದರಿಂದಲೇ ವ್ಯಕ್ತಿ ತನ್ನ ಮೂಲಭೂತ ಹಕ್ಕುಗಳಿಂದ ಹೊರಗುಳಿಯುವಂತೆ ಮಾಡುತ್ತವೆ. "ಹೀಗಾಗಿ ನಿರುದ್ಯೋಗಿಗಳು ತಾವು ಕೆಲಸಮಾಡುವ ಅಥವಾ ಹೊಟ್ಟೆ ಹೊರೆದುಕೊಳ್ಳುವ ಅವಕಾಶವನ್ನು ಪಡೆಯುವುದಕ್ಕಾಗಿ ಸಂಪೂರ್ಣವಾಗಿ ತಮ್ಮ ಮೂಲಭೂ ಹಕ್ಕುಗಳನ್ನು ತೊರೆದು ಬಿಡುವ ಅಥವಾ ಪ್ರ ತ್ವಕ್ಕೆ ಒಪ್ಪಿಸಿಬಿಡುವಂಥ ಪರಿಸ್ಥಿತಿಯು ಒತ್ತಡ ಇರುವುದು."

ಇದೂ ಅಲ್ಲದೆ ಇಂಡಿಯಾದ ಪರಿಸ್ಥಿತಿಯ ಹೇಳುವುದಾದರೆ-ಹಿಂದೂ ಸಮಾಜದ ಒಟ ನಡಾವಳಿಕೆಗಳು ಜಾತೀಯ ಆಧಾರದ ಮೇ ರೂಪಿತವಾಗಿರುವಂಥವಾಗಿವೆ. ಆದ್ದರಿಂದಲ ಸಾಮಾಜಿಕ ಶೋಷಣೆಗಳು ಇಲ್ಲಿ ಇನ್ನು ಉಗ್ರವಾಗಿಯೇ ಇರುವುವು. ಯಾಕಂದರೆ ದ ತರನ್ನೂ ಮೇಲ್ಜಾತಿಯ ಹಿಂದೂಗಳು ಅವ ನುಷವಾಗಿ ಶೋಷಣೆಗೆ ಒಳಗು ಮಾಡಿರುವರ ಹಿಂದೂ ಮೇಲ್ಜಾತಿಯ ಶ್ರೀಮಂತರು ಅದ ಮೇಲ್ಜಾತಿಯ ಬಡವನನ್ನೂ ಶೋಷಣೆಗೆ ಒಳ ಮಾಡಿದ್ದರೂ ಈ ಬಡ ಮೇಲ್ಜಾತಿಯ ಹಿಂದ ಕೂಡ ಶ್ರೀಮಂತ ಮೇಲ್ಜಾತಿಯ ಹಿಂದ ಯಾವ ಧಾರ್ಮಿಕ ಮೌಲ್ಯವನ್ನು ಅನುಸರಿ ವನೋ ಅದೇ ಮೌಲ್ಯವನ್ನು ಅನುಸರಿಸುವ ನಾಗಿರುತ್ತಾನೆ. ಆದ್ದರಿಂದ ಯಾವ ಶ್ರೀಮಂ ಜನರನ್ನು ತುಳಿಯುವ ಗುಣವನ್ನು ಹೊಂದಿರ ತ್ತಾನೆಯೋ ಅವನಿಗೆ ಅವನ ಜಾತಿಯ ಬ ವನೂ ಸಾಮಿಲಾಗಿಯೇ ಇರುವನು. ಅದರಿಂ ಹಿಂದೂ ಕಾರ್ಮಿಕರಲ್ಲಿ ಭ್ರಾತೃತ್ವದ ಕೊರ ಎದ್ದು ಕಾಣುತ್ತದೆ. ಹೀಗಾಗಿ ಕಾರ್ಮಿಕ

ಧಾರವಾಡ ಮತ ಪೆಟ್ಟಿಗೆಯಲ್ಲಿ ದ. ಸಂ. ಸ. ಕೆಂಪು ಕರಪತ್ರ

ಧಾರವಾಡದ ಉತ್ತರ ಕ್ಷೇತ್ರದಲ್ಲಿ ಜನವರಿ6ರಂದು ನಡೆದ ಮತದಾನದತ 2ನೇವಾರ್ಡಿನ ಗೊಲ್ಲರ ಕಾಲನಿ ಮದಿಹಾಳದ ಮತಪೆಟ್ಟಿಗೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಬಡಜನರೇ ಎಚ್ಚರ! ಎಚ್ಚರ!!! ಚುನಾವಣೆ ಒಂದು ವಂಚನೆ!! ತಲೆಬರಹದ ಕೆಂಪುಕರಪ್ರತ ಹಾಗೂ ಕೈಬರಹದ ಘೋಷಣೆಗಳು ಕಂಡು ಬಂದವು.

ಒಬ್ಬ ಮತದಾರ ಮತಪೆಟ್ಟಿಯಲ್ಲಿ ನಿವೆಲ್ಲರೂ ಬಡವರಿಗೆ ಮೋಸ ಮಾಡಿದ್ದಿರಿ ಓಟಿನಲ್ಲಿ ನನಗೆ ನಂಬಿಕೆಯಿಲ್ಲ ಹೋರಾಟದಲ್ಲಿ ನಂಬಿಕೆ ಇದೆ." ಎಂದು ಬರೆದರೆ, ಇನ್ನೊಬ್ಬ ಮತದಾರರು "ನಾನು ಹರಿಜನ ಜಾತಿಯಲ್ಲಿ ಹುಟ್ಟಿದವಳು ಇಲ್ಲಿಯವರೆಗೆ ಎಲ್ಲ ಧರ್ಮ ಜಾತೀಯ ಬಡವರ ರಕ್ತ ಕುಡಿದು ತೇಗಿ ಮಾಂಸ ತಿಂದು ಕೊಬ್ಬಿದ ನಿಮಗೆಲ್ಲರಿಗೂ ಬಡವರ ಮತಕೇಳುವ ಹಕ್ಕಿಲ್ಲ. ಇಂದಿರಾ, ಮುರಾರ್ಜಿ, ಚರಣಸಿಂಗ್, ಅರಸು, ಜಗಜೀವನರಾಂ ನಿಮ್ಮನ್ನೆಲ್ಲ ಧಿಕ್ಕರಿಸಲು ಬಡಜನ ಎದ್ದು ಬರುತ್ತಿದ್ದಾರೆ. ಎಚ್ಚರ! ಎಚ್ಚರ!!!" ಎಂಬ ಚೀಟಿಯನ್ನು ತಮ್ಮ ಮತಪತ್ರದೊಡನೆ ಹಾಕಿದ್ದರು.

ಅಲ್ಲದೇ ಮತಪೆಟ್ಟಿಗೆಯಲ್ಲಿ ದಲಿತ ಸಂಘರ್ಷ ಸಮಿತಿಯ ಎರಡು ಕರಪತ್ರಗಳು ಕಂಡುಬಂದವು. ಕರಪತ್ರದಲ್ಲಿ ಬಡವರೇ ನಿಮ್ಮ ಉದ್ಧಾರ ಒಬ್ಬ ವ್ಯಕ್ತಿಯಿಂದ ಸಾಧ್ಯವಿಲ್ಲ ನಿಮ್ಮ ಉದ್ಧಾರ ನಿವೆಲ್ಲ ಒಗ್ಗಟ್ಟಾದಾಗ ಹೋರಾಟ ಮಾಡಿದಾಗ ಮಾತ್ರ ಸಾಧ್ಯ" ಎಂದು ಘೋಷಿಸಲಾಗಿದೆ ಎಂದು ಬಲ್ಲ ಮೂಲಗಳಿಂದ ತಿಳಿಬಂದಿದೆ.

ಕರ್ನಾಟಕದಾದ್ಯಂತ ಸಂಘಟಿತರಾಗಿರುವ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿಯು ಚುನಾವಣೆಗೆ ಮುಂಚೆ ಈ ಕರಪತ್ರಗಳನ್ನು ಪ್ರತಿ ಹಳ್ಳಿಹಳ್ಳಿಗೂ ತಲುಪಿಸಿತ್ತು.

ದಲಿತ ಕಲಾಮಂಡಲಿ ಜಾಥಾ-

ಎಂ. ಡಿ. ಗಂಗಯ್ಯ

ದಲಿತ ಸಂಘರ್ಷ ಸಮಿತಿ ಚಿಕ್ಕಮಗಳೂರು ಜಿಲ್ಲೆ ಶಾಖೆಯ ದಲಿತ ಕಲಾ ಮಂಡಲಿಯು ಜನವರಿ 10 ರಿಂದ 20 ರವರೆಗೆ ಆಲ್ದೂರ್ ಹೋಬಳಿಯಲ್ಲಿ ಸಾಂಸ್ಕೃತಿಕ ಜಾಥಾ ನಡೆಸಿತು. ಹಳ್ಳಿಯಿಂದ ಹಳ್ಳಿಗೆ ಕಾಲುನಡಿಗೆಯಲ್ಲಿ ಹೊರಟ ಕಾರ್ಯಕರ್ತರು ಚಾಜಿಗನಹಳ್ಳಿ, ತೊಂಡವಳ್ಳಿ, ಹೊಲೆಗೆರೆಹಳ್ಳಿ, ಹುಲುವಲಿ, ಮಾಣಿಮಕ್ಕಿ, ತಡಸೆ, ಹಾಂದಿ. ಸಾಲುಗುಂಬ್ರಿ, ಸತ್ತಿಹಳ್ಳಿ, ಕಾರೇಹಟ್ಟಿ, ಯಲೇಗೂಡಿಗೆ, ಇಳೇಕಾನ್, ಗುಡ್ಡದ ಮನೆ, ಚಂಡಗೋಡು, ಹವ್ವಳ್ಳಿ, ನೇಜಿಪೇಟೆ, ಆಲ್ದೂರ್ ಮುಂತಾದ ಕಡೆ ದಲಿತರ ನಿಜ ಬದುಕನ್ನ ಹೇಳುವ ನಾಟ ಳನ್ನು ಪ್ರದರ್ಶಿಸಿದರು.

ಜಾಥಾದಲ್ಲಿ ಕಂಡದ್ದು ಅಸ್ಪೃಶ್ಯತೆ-ಹಸಿವಿನಿ ನರಳುತ್ತಿರುವ ದಲಿತರು ತಮ್ಮ ಉದ್ಧಾ ಯಾರಿಂದಲೋ ಆಗುವುದೆಂಬ ಆಸೆಯ ನೋ ಭದ್ರಾವತಿ ತಾಲ್ಲೂಕು ಮಂಡಲಿ ಅಧ್ಯಕ್ಷ ಗಿದ್ದ ಲೋಕೇಶಪ್ಪ ಮತ್ತವನ ಬೆಂಬಲಿಗರಿಂ ಕೊಲೆಗೀಡಾದ ಜೀತಗಾರ ಪತ್ರೆಸಂಗಪ್ಪ ನಿಜ ಬದುಕನ್ನಾಧರಿಸಿದ "ಪತ್ರೆ ಸಂಗಪ್ಪ ಕಗ್ಗೊಲೆ", "ಜೀತದಟ್ಟಿ ರಂಗ" 'ಬೆಲ ಮುಂತಾದ ನಾಟಕಗಳನ್ನು ನಾವು ಪ್ರದರ್ಶಿ ದಾಗ, ದಲಿತರ ಬದುಕಿನ ಬದಲಾವಣೆ ಕುರಿ

ಆರ್. ಅಂಬೇಡ್ಕರ್ ಅವರ ವಿಶ್ಲೇಷಣೆ

ಂಪೂರ್ಣವಾಗಿ ಒಡೆದು ಹೋಗಿರುವರು.

ವಾಳವಾದ ಮನಃಪ್ರವೃತ್ತಿವುಳ್ಳಂಥ ರಾಜ ಯ ಧುರೀಣರು. ಬಂಡವಾಳಶಾಹಿಗಳು ಡ ಧಾರ್ಮಿಕ ಕ್ರೂರತೆಯನ್ನು ಎದುರಿಸ ಸುದು. ಅದೇ ಸಮಯದಲ್ಲಿ ಧಾರ್ಮಿಕ ತ್ರಗಳಿಗೆ ಕೊಡುಗೆ ರೂಪದಲ್ಲಿ ಆರ್ಥಿಕ ದ್ಧಿಕ ಸಹಾಯವನ್ನೂ ಮಾಡುತ್ತಿರುವವರು. ರೀತಿಯ ಕೊಡುಗೆಯ ಮುಖೇನ ಇಂಥ ಗೆ ನಮ್ಮ ಧರ್ಮ ನಿಚ್ಚಳವಾಗಿ ನಮಗೆ

ಮೂಲ : ಡಿ. ಎಚ್. ಶ್ರೀಕಾಂತ್

ಅನು : ದೇವಯ್ಯ ಹರವೆ

ಾತ್ಮಿಕ ಸಂತೋಷವನ್ನು ಕೊಡುವುದು ನ್ನುವ ನಂಬುಗೆ ಇರುತ್ತದೆ. "ಹೀಗಾಗಿ ಥ ಇಬ್ಬಂದಿ ವ್ಯಕ್ತಿತ್ವ ಇಟ್ಟುಕೊಂಡವರು ಮಾಜದ ಕ್ರೂರತೆಯ ವಿರುದ್ಧ ಹೋರಾಡು ವೆಂದು ವರ್ಣಿಸುತ್ತಾರೆ. ಬಡಜನ ಸಮೂಹ ಥವರುಗಳ ಮೇಲೆ ಸಂಪೂರ್ಣ ಭರವಸೆ ಟ್ಟುಕೊಂಡಿರುವುದರಿಂದ ಮತ್ತೆ ಯಾವ ವರ್ಗ ಜ್ಞೆ ಬೆಳೆದರೆ, ಇವರಿಗೆ ಒಳ್ಳೆಯದಾಗು ದೋ ಅದು ಇಲ್ಲದಂತಾಗುವುದು.

ಂದು ಅನುಭವ

ಾಂತಿಕಾರಿ ಹಾಡುಗಳನ್ನು ಹಾಡುತ್ತಿದ್ದಾಗ ರು ತಮ್ಮ ಕಣ್ಣಲ್ಲಿ ಇಳಿಯುತ್ತಿದ್ದ ನೀರನ್ನು ಸಿಕೊಳ್ಳುತ್ತಿದ್ದರು.

ಂದಲ್ಲ ಒಂದಿನ ಈ ಶ್ರೀಮಂತರ ಸೂಳೆ ಕ್ಕ ಮೂಳೆ ಮುರಿತಿವಿ" ಎಂಬ ಗೊಣಗು ತುಗಳೂ ಅಲ್ಲಲ್ಲಿ ಕೇಳಿ ಬರುತ್ತಿದ್ದವು.

ಾವೇಶವಾಗಿ, ಸೌಜನ್ಯದಿಂದ ನಮ್ಮನ್ನೆಲ್ಲ ದು ಊಟ ಹಾಕುತ್ತಿದ್ದಾಗ ಅವರೊಡನಿದ್ದ ಗೆಗಳು ನಮ್ಮ ಹೋರಾಟಕ್ಕೆ ಹೊಸ ಹೊಸ ನೂಮ ಒದಗಿಸಿಕೊಟ್ಟವು.

ಆಳುವ ಶ್ರೀಮಂತ ವರ್ಗ

ವ್ಯಕ್ತಿಯ ಹಿತಾಸಕ್ತಿಯನ್ನು ಕಾಪಾಡಬೇಕಾದರೆ ಅವನಿಗಿರುವ ಮೂಲಭೂತ ಹಕ್ಕುಗಳಿಗೆಸಂಬಂಧ ಪಟ್ಟಂಥ ಕಾಯಿದೆಯೇ ಸಾಕೆಂದು ಭಾವಿಸಿದ್ದ ಸಂವಿಧಾನ ರಚನಾ ಕಾರ್ಯದಲ್ಲಿ ತೊಡಗಿದ್ದ ನ್ಯಾಯವಾದಿಗಳನ್ನು ಡಾ॥ ಅಂಬೇಡ್ಕರ್ ಟೀಕಿಸುವರು. ವ್ಯಕ್ತಿಯ ವೈಯಕ್ತಿಕ ವಿಷಯಗಳಾದ ಆರ್ಥಿಕ-ಸಾಮಾಜಿಕ ಮತ್ತು ಅವನಿಗಿರುವ ನಿವ್ವಳ ಆಸ್ತಿಯ ಮಧ್ಯೆ ಪ್ರವೇಶಿಸುವುದಿಲ್ಲವೋ ಆಗ ಮಾತ್ರ ವ್ಯಕ್ತಿಗೆ ಸ್ವಾತಂತ್ರ್ಯ ಎಂಬುದು ದೊರೆದಂತಾಗುವುದು. ಎಲ್ಲಿ ಪ್ರಭುತ್ವ ಮಧ್ಯೆ ಪ್ರವೇಶಿಸುವುದಿಲ್ಲವೋ ಆಗ ಮಾತ್ರ ಸ್ವಾತಂತ್ರ್ಯ ಎಂಬುದು ಹುಟ್ಟುವುದು ಸಂವಿಧಾನ ಕರ್ತ ನ್ಯಾಯವಾದಿಗಳ ಮತ ಎಂದು ಅಂಬೇಡ್ಕರ್ ಹೇಳುತ್ತಾರೆ. ಆದರೆ ಈ ವಾದ ನಿಜವಾದ ಮೂಲಭೂತ ಪ್ರಶ್ನೆಯನ್ನು ತೊಡೆದುಹಾಕದು. ಯಾರಿಂದ ಯಾರಿಗಾಗಿ ಈ ಥರಾ ಸ್ವಾತಂತ್ರ್ಯ ಬರುವುದು? ಇದು ಬಹಳ ಮಹತ್ವದ ಪ್ರಶ್ನೆ. "ಇದು ಅನಿವಾರ್ಯವಾಗಿ ಭೂಮಾಲೀಕರಿಗೆ, ಬಂಡವಾಳಶಾಹಿಗಳಿಗೆ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಕೊಟ್ಟಂಥ ಒಂದು ಸ್ವಾತಂತ್ರ್ಯವಾಗಿರುತ್ತದೆ. ಹಾಗಾಗಿ ಮತ್ತೆ ಶೋಷಣೆ ವಿಸ್ತಾರವಾದಂತಾಗುವುದು. ಆಗ ಕಾರ್ಮಿಕರ ಮತ್ತು ಭೂಹೀನರ ಬದುಕು ಮತ್ತಷ್ಟು ದುರ್ಬಲವಾಗುವುದು. ಹೀಗೆ ಕೆಲವೇ ಜನಗಳಸ್ವಾತಂತ್ರ್ಯವೆಂಬುದುಮತ್ತೊಂದು ರೀತಿಯ ಶ್ರೀಮಂತ ಭೂಮಾಲೀಕರ ಸರ್ವಾಧಿಕಾರವೇ ಹೊರತು ಬೇರೆಯಲ್ಲ. ಇದು ಬಡ ಸಮೂಹದ ಮೂಲಭೂತ ಹಕ್ಕುಗಳನ್ನು, ಸ್ವಾತಂತ್ರ್ಯವನ್ನು, ಸಮಾನತೆಯನ್ನು ಅವರು ತುಂಬಿಕೊಂಡಿರುವ ಸಂತೋಷದ ಸಂಗತಿಗಳನ್ನೂ ಸಂಪೂರ್ಣವಾಗಿ ಹಾಳುಮಾಡುವಂಥದ್ದಾಗಿರುವುದು.

ಆದ್ದರಿಂದ ಮೇಲಿನ ಸಮಸ್ಯೆಯ ಈ ರೀತಿಯ ವೈಜ್ಞಾನಿಕ ವಿಶ್ಲೇಷಣೆಯಿಂದ ತಿಳಿದು ಬರುವ ಸಂಗತಿಯೆಂದರೆ–ಈ ರೀತಿ ಬಡವ ಮತ್ತು ಬಲ್ಲಿದರ ನಡುವೆ ಮಹತ್ತರವಾದ ದ್ವಂದ್ವ ಉಂಟಾಗುವಾಗ ಮಿಕ್ಕ ಮೂಲಭೂತ ಹಕ್ಕುಗಳು ಎಂಬುವು ಉಳಿಯುವಂಥವಲ್ಲ.

(ಮುಂದುವರೆಯುವುದು)

ಲಾಸ್ ಏಂಜಲ್ಸನಿಂದ ನೀನು ಬರೆದಿದ್ದಿ

ಇಲ್ಲಿ ತುಂಬಿದ ಪೇಟೆ ಬೀದಿಗಳಲಿ ಹೋಟೇಲುಗಳಲಿ
ಸುತ್ತ ಮುತ್ತ ಎಲ್ಲ ಕಡೆಗೂ
ಇಂಡಿಯನ್ ಮತ್ತು ನಾಯಿ, ಅಳೆಯುತ್ತಾರೆ
ಎರಡನೂ ಒಂದೇ ಅಳತೆಯಿಂದ
ನಿಗ್ಗರ ಕರಿಯ ಎಂದು ಬಯ್ಯುತ್ತಾರೆ, ನಗೆಯಾಡುತ್ತಾರೆ.
ಆತ್ಮದಾಳದಲಿ ಸಾವಿರಾರು ಚೇಳು ಕುಟುಕಿದಂತಾಗುತ್ತದೆ.
ಇದನೆಲ್ಲವನು ಓದಿ
ಹಿತವೆನಿಸಿತು ನನಗೆ ಬಹಳಷ್ಟು
ತಲೆತಲಾಂತರದಿಂದ ನಾವು ಅನುಭವಿಸಿದ್ದು
ಇಂದು ನಿನ್ನ ಪಾಲಿಗೂ ಬಂದಿತು.

ಮರಾಠಿ ಮೂಲ: ದಯಾ ಪವಾರ **ಕನ್ನಡಕ್ಕೆ: ಬಾಲಚಂದ್ರ ಜಯಶೆಟ್ಟಿ**

ಕತ್ರಗುಪ್ಪೆಯಲ್ಲಿ ದ. ಸಂ. ಸ. ಪ್ರತಿಭಟನೆ ಮೆರವಣಿಗೆ


ವರದಿ : ರಾಜಣ್ಣ

ಸವರ್ಣೀಯರು ದಲಿತರ ಮೇಲೆ ನಡೆಸಿದ ದೌರ್ಜನ್ಯದ ವಿರುದ್ಧ ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕು ಕತ್ರಗುಪ್ಪೆಯಲ್ಲಿ ದಲಿತರಿಗೆ ಈ ಹಿಂದೆ ವಿಧಿಸಿದ್ದ ಅಸ್ಪೃಶ್ಯತಾ ಗೃಹ ಬಂಧನದ ವಿರುದ್ಧ ಜನವರಿ 27ರಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಶಾಖೆ ಪ್ರತಿಭಟನಾ ಮೆರವಣಿಗೆ ನಡೆಸಿತು.

ಮೆರವಣಿಗೆಯ ನಂತರ ಊರಿನ ಅಶ್ವತ್ಥಕಟ್ಟೆ ಆವರಣದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಸಂಘರ್ಷ ಸಮಿತಿ ಕಾರ್ಯಕರ್ತರಾದ ಹನುಮಂತಯ್ಯ, ನರಸಿಂಹಪ್ಪ, ಗೋಪಾಲ್, ವೆಂಕಟೇಶ್, ದೊಡ್ಡಎಲ್ಲಪ್ಪ ಮುಂತಾದವರು ಮಾತನಾಡಿದರು.

ಬೆಂಗಳೂರು ಜಿಲ್ಲೆ ದೇವನಹಳ್ಳಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಶಾಖೆ ಜನವರಿ 16 ರಂದು ಪ್ರತಿಭಟನಾ ಮೆರವಣಿಗೆ ನಡೆಸಿ ಅನ್ಯಾಯಕ್ಕೊಳಗಾಗಿರುವ ದಲಿತರ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ತಹಸಿಲ್ದಾರ್, ಬಿ. ಡಿ. ಒ. ಮತ್ತು ಪೋಲೀಸ್ ಅಧಿಕಾರಿಗಳ ಗಮನಕ್ಕೆ ತಂದು ಶೀಘ್ರವೇ ಕಾರ್ಯರೂಪಕ್ಕೆ ತರುವಂತೆ ಒತ್ತಾಯಪಡಿಸಲಾಯಿತು.

ದಲಿತರಿಗೆ ಸರ್ಕಾರಿ ಅಧಿಕಾರಿಗಳಿಂದ ಆಗುತ್ತಿರುವ ಅನ್ಯಾಯ, ಸವರ್ಣೀಯರ ದುರಾಕ್ರ



ಮಣ ದೌರ್ಜನ್ಯಗಳನ್ನು ಖಂಡಿಸಿ ನಡೆದ ಈ ಪ್ರತಿಭಟನಾ ಮೆರವಣಿಗೆಯಲ್ಲಿ ತಾಲ್ಲೂಕಿನ ಬೇರೆ ಬೇರೆ ಹಳ್ಳಿಗಳಿಂದ ಬಂದಿದ್ದ ನೂರಾರು ದಲಿತರು ಭಾಗವಹಿಸಿದ್ದರು.

ಬಾಗೇಪಲ್ಲಿ: ಡಾ.ಅಂಬೇಡ್ಕರ್ ಸ್ಮರಣ ದಿನ ಆಚರಣೆ

ವರದಿ : ಮೂರ್ತಿ

ಈ ದೇಶದ ದಲಿತರ ಮಹಾನಾಯಕ ಅಂಬೇಡ್ಕರ್‌ರವರ 23ನೇ ಸ್ಮರಣ ದಿನವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ಬಾಗೇಪಲ್ಲಿ ಶಾಖೆ ಜನವರಿ 28 ರಂದು ಆಚರಿಸಿತು.

ಅಂಬೇಡ್ಕರ್‌ರವರ ಭಾವಚಿತ್ರದೊಂದಿಗೆ ದಲಿತ ಕಾಲನಿಯಿಂದ ಹೊರಟು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಸಂಜೆ ಕೆ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯಲ್ಲಿ ಎಂ. ಡಿ. ಗಂಗಯ್ಯ, ಮ. ನ. ಜವರಯ್ಯ ಪ್ರ. ವೆಂಕಟೇಶ್ ಮಾತನಾಡಿದರು. ಮನಜ ಅನುವಾದಿಸಿರುವ ಅಂಬೇಡ್ಕರ್‌ರವರ 'ಗಾಂಧಿ ಮತ್ತು ಗಾಂಧೀವಾದ' ಪುಸ್ತಕವನ್ನು ರಾಮದೇವರಾಣಿ ಬಿಡುಗಡೆ ಮಾಡಿದರು.

ಕೋಲಾರ ದಲಿತ ಕಲಾ ಮಂಡಳಿಯಿಂದ ಕ್ರಾಂತಿ ಗೀತೆಗಳ ಕಾರ್ಯಕ್ರಮ ನಡೆಯಿತು.

ಜಗಜೀವನರಾಂ ಹಾಸ್ಟೆಲ್ ಭ್ರಷ್ಟರಾಜಕಾರಣಿ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರಿನ ಜಗಜೀವನರಾಂಬಾಲಕಿಯರವಿದ್ಯಾರ್ಥಿನಿಲಯದ ಅಧ್ಯಕ್ಷ ಮಾಜಿ ಶಾಸಕ ಎಂ.ಎಚ್. ಜಯಪ್ರಕಾಶ ನಾರಯಣರು ವಿದ್ಯಾರ್ಥಿನಿಲಯದಲ್ಲಿ ಕಳ್ಳತನದ ಮೂಲಕ ದವಸ ಧಾನ್ಯ ಸಾಗಣಿಕೆ ಮತ್ತು ಸುಳ್ಳುಲೆಕ್ಕ ಇಟ್ಟುಕೊಂಡು ಹಗಲು ದರೋಡೆ ಕೃತ್ಯದಲ್ಲಿ ತೊಡಗಿದ್ದಾರೆಂದು ಶ್ರೀರಾಮಪುರಂನ ದಲಿತ ಯುವಜನ ಒಕ್ಕೂಟ ದೂರು ನೀಡಿದೆ.

ಸರ್ಕಾರ ಇತ್ತಗಮನಿಸಿ ಈ ಭ್ರಷ್ಟ ರಾಜಕಾರಣಿಯನ್ನು ಹೊರದೂಡಿ ವಿದ್ಯಾರ್ಥಿನಿಲಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಒಕ್ಕೂಟ ಒತ್ತಾಯಿಸಿದೆ.

ಧಾರವಾಡದಲ್ಲಿ ದಲಿತ ಮಹಿಳಾ ವಿಮೋಚನಾ ಸಭೆ

ಕರ್ನಾಟಕ ದಲಿತ ಸಂಘರ್ಷ ಸಮಿತಿ ಧಾರವಾಡ ಶಾಖೆಯು ಜನವರಿ 26ರಂದು ದಲಿತ ಮಹಿಳಾ ವಿಮೋಚನಾ ಸಭೆ ನಡೆಸಿತು.

ಎಡಬಿಡದೆ ನಡೆಯುತ್ತಿರುವ ದಲಿತ ಮಹಿಳೆಯರ ಮೇಲಿನ ಅತ್ಯಾಚಾರ, ಮುಂತಾದ ಕೊಲೆ-ಸುಲಿಗೆ ಪ್ರಕರಣಗಳನ್ನು ಸಭೆಯಲ್ಲಿ ಖಂಡಿಸಲಾಯಿತು.

ಸಭೆಯ ಆರಂಭಕ್ಕೆ ಮುನ್ನ ಊರಿನ ಬೀದಿಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಗಣರಾಜ್ಯೋತ್ಸವಕ್ಕೆ ದ. ಸಂ. ಸ. ಪ್ರತಿಭಟನೆ

[1.ನೇ ಪುಟದಿಂದ]

ಮ. ನ. ಜವರಯ್ಯ ಅನುವಾದಿಸಿದ ಗಾಂಧೀಜಿಯ ಇಬ್ಬಂದಿತನ ಕುರಿತು ಅಂಬೇಡ್ಕರ್‌ರವರು ಬರೆದ "ಗಾಂಧಿ ಮತ್ತು ಗಾಂಧಿವಾದ" ಕೃತಿಯನ್ನು ಅಖಿಲ ಭಾರತ ಕೆನರಾ ಬ್ಯಾಂಕ್ ದಲಿತ ನೌಕರರ ಸಂಘದ ಅಧ್ಯಕ್ಷ ಪುರುಷೋತ್ತಮದಾಸ್ ಬಿಡುಗಡೆ ಮಾಡಿದರು.

ಸಂವಿಧಾನಬದ್ಧ ಹಕ್ಕು, ಸವಲತ್ತು, ಮೀಸಲಾತಿ ಹೆಸರಿನಲ್ಲಿ ದಲಿತರನ್ನು ವಂಚಿಸುತ್ತಿರುವ ಆಳುವ ಪಕ್ಷಗಳನ್ನು ಕಟುವಾಗಿ ಟೀಕಿಸಿದ ಜನಕರಾಜ್, ದೊಡ್ಡಎಲ್ಲಪ್ಪ, ಹನುಮಂತಯ್ಯ ಮತ್ತು ನರಸಿಂಹಪ್ಪ ದಲಿತರ ವಿಮೋಚನೆಗಾಗಿ ಸಂಘಟಿತ ಹೋರಾಟದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ದುಡಿಯುವ ದಲಿತರಿಗೆ ಅನ್ನ, ಬಟ್ಟೆ ಸಿಗದ ಈ ದೇಶದ ಸ್ವಾತಂತ್ರ್ಯ, ಗಣರಾಜ್ಯೋತ್ಸವಗಳಿಗ ಏನು ಅರ್ಥ ಇದೆ ಎಂದು ಪ್ರಶ್ನಿಸಿ ಅವರು ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು.

ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಹಿಂದೆ ದಲಿತ ಜೀತಗಾರನೊಬ್ಬನ ಕೊಲೆ ನಡೆದ ಘಟನೆಯನ್ನು ಸಾದರ ಪಡಿಸುವ "ಪತ್ರ ಸಂಗಪ್ಪನ ಕಗ್ಗೊಲೆ" ನಾಟಕವನ್ನು ದಲಿತ ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಬಾಗೇಪಲ್ಲಿ : ಜೀತ ನಿರಾಕರಿಸಿದ ದಲಿತರ ಮೇಲೆ ಹಲ್ಲೆ

ವರದಿ : ನರಸಿಂಹಯ್ಯ

ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಬುದ್ದಲವಾರ ಹಳ್ಳಿಯಲ್ಲಿ ಜನವರಿ 28 ರಂದು ಜೀತ ನಿರಾಕರಿಸಿದ ದಲಿತರ ಮೇಲೆ ಸವರ್ಣೀಯ ಭೂ ಮಾಲೀಕರು ಹಲ್ಲೆ ನಡೆಸಿದ್ದಾರೆ.

ಹಲ್ಲೆಗೊಳಗಾಗಿರುವ ದಲಿತರಾದ ಚಿನ್ನವೆಂಕಟರಾಯಪ್ಪ, ವೆಂಕಟರಾಮಣ್ಣ ಮತ್ತು ಬಯ್ಯನ್ನ ಎಂಬಾತರು ಸುಮಾರು 8 ವರ್ಷಗಳಿಂದ ಭೂಮಾಲೀಕ ಮುದ್ದಿರೆಡ್ಡಿ ಮಕ್ಕಳಾದ ಕೆ. ಚಿನ್ನವೆಂಕಟ್ರಾಯಪ್ಪ, ಸುಬ್ಬರೆಡ್ಡಿಯ ಮನೆಯಲ್ಲಿ ಜೀತ ಮಾಡುತ್ತಿದ್ದು ಈಗ ಜೀತ ಮುಂದುವರೆಸಲು ನಿರಾಕರಿಸಿರುವುದೇ ಹಲ್ಲೆಗೆ ಕಾರಣ. ದಲಿತರ ಒಂದು ಜೊತೆ ಹಸುಗಳನ್ನೂ ಜಮೀನುದಾರರಾದ ಚಿನ್ನವೆಂಕಟ್ರಾಯಪ್ಪ-ಸುಬ್ಬರೆಡ್ಡಿ ಅಪಹರಿಸಿದ್ದಾನೆ.

ಇದೇ ಗ್ರಾಮದ ದಲಿತ ಎ. ಕೆ. ಚಿನ್ನ ನಾರಾಯಣಪ್ಪನ ಮಗ ಸ್ಕೂಲಿಗೆ ಹೋಗುತ್ತಿರುವಾಗ ಹಿಡಿದುಕೊಂಡು ಅವನು ತಮ್ಮ ಮರದಲ್ಲಿ ಹುಣಿಸೇಕಾಯಿ ಕೀಳುತ್ತಿದ್ದ ಎಂಬ ಆರೋಪ ಹೊರಿಸಿ ಮೇಲ್ಕಂಡ ಜಮೀನುದಾರನು ಥಳಿಸಿ ಚಪ್ಪಲಿಯಿಂದ ಹೊಡೆದಿರುತ್ತಾನೆ. ಇದನ್ನು ಕೇಳಿದ ಎ. ಕೆ. ಚಿನ್ನ ನಾರಾಯಣಪ್ಪನಿಗೆ ಸುಬ್ಬ ಕುಡುಗೋಲಿನಿಂದ ಹೊಡೆದಿದ್ದು, ಆತನ ಎಡ ಕಣ್ಣಿನ ಪಕ್ಕದಲ್ಲಿ ಗಾಯವಾಗಿದೆ.

ಈ ಬಗ್ಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಬಾಗೇಪಲ್ಲಿ ತಾ॥ಶಾಖೆ ಡಿಪ್ಯೆ ಎಸ್.ಪಿ. ಸರ್ಕಲ್ ಇನ್ಸ್‌ಪೆಕ್ಟರ್, ಜಿಲ್ಲಾಧಿಕಾರಿಗಳು ಮತ್ತು ತಹಸಿಲ್ದಾರರಿಗೆ ದೂರು ನೀಡಿದ್ದು ಕ್ರಮಕ್ಕೆ ಒತ್ತಾಯಿಸಿದೆ.

ದಲಿತ ಯುವಕನ ಕೊಲೆ

[ಒಂದನೇ ಪುಟದಿಂದ]

ಸಾಧಿಸಲು ಬಹುದಿನಗಳಿಂದ ಹೊಂಚು ಹಾಕುತ್ತಿದ್ದರು.

ಗಾಮದಲ್ಲಿನ ಆಂಜನೇಯ ಜಾತ್ರೆಯಲ್ಲಿ ತಮಟೆ ಹೊಡೆಯದಿದ್ದುದಕ್ಕಾಗಿ ಡಿಸೆಂಬರ್ 2ರಂದು ಸಂಜೆ ಚಾವಡಿಯಿಂದ ಊರೊಳಕ್ಕೆ ಬರುತ್ತಿದ್ದ ಕೆಲವು ದಲಿತರ ಮೇಲೆ ಸವರ್ಣೀಯರು ಅಮಾನುಷವಾಗಿ ಹಲ್ಲೆನಡೆಸುತ್ತಿದ್ದಾಗ ಕೇಳಿಬಂದ ಕೂಗಾಟ-ಚೀರಾಟದಿಂದ ಸ್ಥಳಕ್ಕೆ ಓಡಿಬಂದ ಖಾನಪೂರದಯ್ಯನ್ನು ಸಿಕ್ಕಾಬಟ್ಟೆ ಹೊಡೆದು ಕೊಂದರೆಂದು ಆತನ ಸಂಬಂಧಿಗಳು ತಿಳಿಸಿದ್ದಾರೆ.

ಕೊಲೆಗಡುಕರನ್ನು ಶಿಕ್ಷಿಸ ಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಯಚೂರು ಜಿಲ್ಲಾ ಶಾಖೆ ಸರ್ಕಾರವನ್ನು ಒತ್ತಾಯಿಸಿದೆ.

ಗೋರಖ್‌ಪುರ ಬಳಿ ದಲಿತ ಯುವಕನ ಸಜೀವ ದಹನ

ಗೋರಖ್‌ಪುರದ ಬಳಿ ದಲಿತ ಯುವಕನೊಬ್ಬನನ್ನು ಜನವರಿ 30ರಂದು ಮಧ್ಯರಾತ್ರಿ ಸಜೀವ ದಹನ ಮಾಡಲಾಯಿತು.

ಈ ಯುವಕನು ಹತ್ತಿರದ ಗ್ರಾಮದಲ್ಲಿನ ತನ್ನ ಸಂಬಂಧಿಗಳ ಮನೆಗೆ ಹೋಗುತ್ತಿದ್ದಾಗ ಕೆಲವು ದುಷ್ಕರ್ಮಿಗಳು ಆತನನ್ನು ಹಿಡಿದು ತಂದು ಮೈಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಇಟ್ಟರೆಂದು ಅಧಿಕೃತ ಮೂಲಗಳು ತಿಳಿಸಿವೆ.

ಮಧುಗಿರಿ ; ದಲಿತರ ಮೇಲಿನ ಅನ್ಯಾಯ ವಿರುದ್ಧ ಪ್ರದರ್ಶನ

ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ದಲಿತರ ಮೇಲೆ ನಡೆಯುತ್ತಿರುವ ಅನ್ಯಾಯ, ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯ ಮನೋಭಾವದ ವಿರುದ್ಧ ಇತ್ತೀಚೆಗೆ ದ.ಸಂ.ಸ ಪ್ರತಿಭಟನಾ ಮೆರವಣಿಗೆ ನಡೆಸಿತು.

ಮೆರವಣಿಗೆಯಲ್ಲಿ ನೂರಾರು ದಲಿತರು ಭಾಗವಹಿಸಿದ್ದು ರೋಷದಿಂದ ಘೋಷಣೆಗಳನ್ನು ಕೂಗುತ್ತಿದ್ದರು. ಅವುಗಳಲ್ಲಿ "ಮರಾಠವಾಡ ವಿಶ್ವವಿದ್ಯಾಲಯಕ್ಕೆ ಅಂಬೇಡ್ಕರ್ ವಿ.ವಿ. ನಿಲಯ ಎಂದು ಹೆಸರಿಡಲಿ". "ತಗಡೂರು ಮತ್ತು ಮಾದೇನಹಳ್ಳಿ ದಲಿತರಿಗೆ ನಿವೇಶನ ಸಿಗಲಿ". ಜಕ್ಕೇನಹಳ್ಳಿಯಲ್ಲಿ ಸವರ್ಣೀಯರ ವಶವಾಗಿರುವ ದಲಿತ ಕೃಷ್ಣಪ್ಪನವರ ಜಮೀನು ಮತ್ತೆ ಅವರಿಗೇ ಸಿಗಲಿ"-ಎಂಬುವು ಮುಖ್ಯವಾಗಿದ್ದವು. ನಲವತ್ತು ವರ್ಷಗಳಿಂದಲೂ ವಾಸಕ್ಕಾಗಿ ಜೋಪಡಿ ಕಟ್ಟಿಕೊಳ್ಳಲು ನಿವೇಶನದ ಮಂಜೂರಾತಿಗೆ ಪ್ರಯತ್ನಿಸುತ್ತಾ ಬಂದಿರುವ ಅಲ್ಲಿನ ಯುವಕರು ಇಂದು ಮುಪ್ಪಾಗಿದ್ದಾರೆ.

ಕೋಡಿಹಳ್ಳಿ ದಲಿತರ ಗುಡಿಸಲುಗಳಿಗೆ ಬೆಂಕಿ

(ಪಂಚಮ ಪ್ರತಿನಿಧಿಯಿಂದ)

ಭದ್ರಾವತಿ ತಾಲ್ಲೂಕು ಕೋಡಿಹಳ್ಳಿಯ 30 ದಲಿತರ ಗುಡಿಸಲುಗಳಿಗೆ ಇತ್ತೀಚೆಗೆ ಅಲ್ಲಿನ ಭೂಮಾಲೀಕರು-ಶ್ರೀಮಂತರು ಬೆಂಕಿ ಇಟ್ಟರು. ಬೆಂಕಿಗೆ 9 ಗುಡಿಸಲುಗಳು ಸಂಪೂರ್ಣ ಸುಟ್ಟು ಭಸ್ಮವಾದವು. ಗುಡಿಸಲುಗಳ ಒಳಗೆ ಇದ್ದ ಕೋಳಿಗಳು, ದವಸಧಾನ್ಯ ಬಟ್ಟೆಬರಿ ಎಲ್ಲವೂ ನಾಶವಾದವು.

ಕೋಡಿಹಳ್ಳಿ ರಂಗನಾಥಸ್ವಾಮಿ ದೇವಾಲಯಕ್ಕೆ ಸೇರಿದ 12 ಎಕರೆ ಭೂಮಿಯಲ್ಲಿ 9 ಎಕರೆ ಭೂಮಿಯನ್ನು ದಲಿತರ ಕಳೆದ 7 ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೆ. ಈ ಏಳು ಎಕರೆ ಜಮೀನಿಗಾಗಿ ದಲಿತರು ಈಗ ಸಾಗುವಳಿ ಪಡೆಯಲು ಅರ್ಜಿ ಸಲ್ಲಿಸಿದ್ದು ಭೂನ್ಯಾಯ ಮಂಡಲಿಯ ಮುಂದೆ ವಿಚಾರಣೆ ನಡೆಯುತ್ತಿದೆ.

ದಲಿತರು ಸಾಗುವಳಿಗೆ ಅರ್ಜಿ ಸಲ್ಲಿಸಿದಾಗ ಭೂಮಾಲೀಕರು "ಊರಿಂದ ತೊಲಗಿ ಇಲ್ಲವೆ ನಿಮ್ಮ ಗುಡಿಸಲುಗಳಿಗೆಲ್ಲ ಬೆಂಕಿ ಇಡ್ತೀವಿ" ಎಂದು ಬೆದರಿಕೆ ಒಡ್ಡಿದ್ದರು.

ಹೆದರಿದ ದಲಿತರು ಭದ್ರಾವತಿ ಗ್ರಾಮಾಂತರ ಪೋಲೀಸ್‌ಗೆ ದೂರು ನೀಡಲು ಹೋದರು ಅಲ್ಲಿದ್ದ ದಫೇದಾರ್ ಶಿವನಂಜಪ್ಪನು "ಬೋಳಿಮಕ್ಳ ನಿಮಗೆ ಬೇರೆ ಕೆಲ್ಸ ಇಲ್ವೇನ್ರೊ? ಬರಿ ಸುಳ್ಳು ಕಂಪ್ಲೇಂಟ್ ಕೊಡ್ತೀರಾ? ಎಂದು ಹೀನಾಮಾನವಾಗಿ ಬೈದು ಕಳುಹಿಸಿದನು.

ದಲಿತರ ಮನವಿಯನ್ನು ಕಡೆಗಣಿಸಿದ ಅಂದು ಮಧ್ಯರಾತ್ರಿಯೇ ಗುಡಿಸಲುಗಳಿಗೆ ಬೆಂಕಿಬಿತ್ತು. ಪೋಲೀಸರು ಭೂಮಾಲೀಕರ ಜತೆ ಶಾಮೀಲಾಗಿ ದಲಿತರಿಗೆ ರಕ್ಷಣೆ ಕೊಡಲು ವಿಫಲಗೊಂಡುದರಿಂದಲೇ ಈ ಅನಾಹುತಕ್ಕೆ ಕಾರಣ.

KRNB 364 Panchama Fortnightly 5, February 1980 Regd. No. 29681/76

ಇಂದಿರಾ, ರಾಂ ಮತ್ತು ದಲಿತರು

ಇಂದಿರಾ ಗಾಂಧಿ ಮತ್ತೆ ತಮ್ಮ ತುರ್ತುಪರಿಸ್ಥಿತಿಯ ದುಷ್ಟಕೂಟದೊಡನೆ ಅಧಿಕಾರಕ್ಕೆ ಬಂದಿದ್ದಾರೆ. ಪ್ರಜಾಸತ್ತೆಗೆ ಮತ್ತೆ ಅಪಾಯವಿದೆ ಎಂಬುದು 'ಬುದ್ಧಿಜೀವಿಗಳ' ಮತ್ತು 'ಜನತಂತ್ರವಾದಿ'ವರ್ಗಗಳಲ್ಲಿ ಕೇಳಿಬರುತ್ತಿರುವ ಮಾತು. ಇದರ ಜೊತೆಗೆ ಈ ದೇಶದ ಬಹುಸಂಖ್ಯಾತ ದಲಿತ ವರ್ಗಗಳಲ್ಲಿ ಇಂದಿರಾ ಗೆಲವು ತಮ್ಮ ಗೆಲುವೆಂಬ ಸಂತೋಷ ಉಂಟಾಗಿದೆ. ಮತ್ತೆ ಕೆಲವರಲ್ಲಿ ರಾಂ ಪ್ರಧಾನಿಯಾಗಲಿಲ್ಲವಲ್ಲಾ ಎಂಬ ಹೊಟ್ಟೆನೋವಿನಂತಹ ನರಳಾಟ.

ಇಂದಿರಾ ಗೆಲುವಿನಿಂದ ಅನೇಕ ದಲಿತ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳು ಪರಸ್ಪರ 'ಸಿಹಿ' ಹಂಚಿದರು. ಕೆಲವು ವಿದ್ಯಾರ್ಥಿನಿಲಯಗಳಲ್ಲಿ



ವಿಶೇಷ ಭೋಜನ (Feast) ಮಾಡಿಸಿ ಉಂಡು ಕುಣಿದಾಡಿದರು. ನಮ್ಮ ಸ್ಕಾಲರ್‌ಷಿಪ್ ಇನ್ನೂ 10ವರ್ಷ Extend ಆಯ್ತದೆ ಎಂದರು ಕೆಲವರು,

ಚುನಾವಣೆ ಕೆಲವು ದಿನ ಎನ್ನುವ ಮುನ್ನ ದಲಿತ ವರ್ಗದ ಪರಿಚಿತ ಸಬ್ ಇನ್ಸ್‌ಸ್ಪೆಕ್ಟರ್‌ರೊಬ್ಬರು ಸಿಕ್ಕಿ ಏನ್ ಸಾರ್ Election Trend ಹೆಂಗಿದೆ? ಎಂದು ಮಾತಿಗೆಳೆದರು. "ಯಾರ್ಗೂ ಬಹುಮತ ಬರುದಿಲ್ಲ ಅಂತ ಕಾಣ್ಸುತ್ತೆ", ಒಟ್ನಲ್ಲಿ ಇಂದಿರಾಗಾಂಧಿ ಬರ್‍ಬಾರ್ದು ಅಂದು ಆಕೆಯ ಆಡಳಿತ ವೈಖರಿ, ಸರ್ವಾಧಿಕಾರಿತನ ಕುರಿತು ಒಂದಿಷ್ಟು ಬೈದೆ. ತತ್‌ಕ್ಷಣ ನನ್ನ ಮಾತಿಗೆ ಅಡ್ಡಬಂದು "Sorry Sir ನನ್ಗೆ ಬಹಳ ದುಃಖ ಆಯ್ತದೆ, ನೀವು ನಮ್ಮವರಾಗಿ ಆ ಅಮ್ಮನ್ನ ಹಿಂಗೆಲ್ಲ ಬೈಯೋದು" ಎಂದು ಎದೆ ಮೇಲೆ ಕೈಯಿಟ್ಟು ಕೊಂಡು ಹೊಟ್ಟೆನುಲಿತ ಬಂದವರಂತೆ ಕೊರಗಿ "ನಾನು ಊರಿಗೆ ಹೋಗಿ ನಮ್ಮವರನ್ನೆಲ್ಲ ಸೇರ್‍ಸಿ ಈ ಸಾರಿನೂ ಅಮ್ಮನ್ನಿಗಲ್ಲದೆ ಮತ್ಯಾರಿಗೂ ವೋಟು ಕೊಡಬೇಡಿ ಅಂತ ಸರಿ ಮಾಡಿ ಬಂದಿದ್ದೀನಿ" ಏನೇ ಆದ್ರೂ ನೀವಿಂಗೆ ಆ ಅಮ್ಮನ ಟೀಕಿಸೋದು ನಮ್ಮ ಜನಾಂಗಕ್ಕೆ Shame ಎಂದು ಬೇಸರಗೊಂಡು ಬರ್‍ತೀನಿ ಅಂತ ಕಾಲ್ಕಿತ್ತರು. ಅವರ ಬಗೆಗೆ ನನಗೂ ಒಂದು ರೀತಿಯ Shame ಆಯಿತು.

ಇದಿಷ್ಟಾದರೆ ಕೆಲವು ವಿದ್ಯಾರ್ಥಿಗಳು - ಸರ್ಕಾರಿ ನೌಕರರು ಅಲ್ಲಲ್ಲಿ ಸಿಕ್ಕಾಗ ಇಂದಿರಾ ಗೆಲುವಿನ ಬಗ್ಗೆ ನಗುಮುಖದಲ್ಲಿ ಸಂತೋಷ ತೋಡಿಕೊಂಡರು. ಒಬ್ಬ ವಿದ್ಯಾರ್ಥಿ "77 Electionನಲ್ಲಿ ಜನ ವೋಟು ಮಾಡ್ದಾಗ ದಡ್ಡರು ಅಂದ್ಕೊಂಡಿದ್ದೆ. ಅದೇ ಜನ ಈಗ ಬುದ್ಧಿವಂತ್ರು" ಅಂದ.

ಇವರೆಲ್ಲರಿಗಿಂತ ಭಿನ್ನವಾಗಿ ಆಲೋಚಿಸುವ ಮಹಿಳೆಯೊಬ್ಬರು ಸಿಕ್ಕಿ ದಲಿತರ ಆಶೋತ್ತರಗಳನ್ನು ವ್ಯಕ್ತಪಡಿಸಿದಳು. ಮಳವಳ್ಳಿ ತಾಲ್ಲೂಕಿನ ಗ್ರಾಮವೊಂದರ ಆಕೆ ಹೆಸರು ಕೆಂಪಮ್ಮ. ಸಿಟಿ ಸುತ್ತಿ ಅಷ್ಟಿಷ್ಟು ಬದುಕನ್ನು ಕಂಡಿರುವವಳು. ಮಗನನ್ನ ನೋಡಲು ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದಳು. ಮೊದಲೇ ಪರಿಚಯವಿದ್ದ ಆಕೆ ಆಕಸ್ಮಿಕವಾಗಿ ಸಿಕ್ಕಾಗ "ಏನಪ್ಪ ರಾಮನ್ಗೆ ಮೋಸ ಮಾಡ್ಬುಟ್ರಲ್ಲ" ಎಂದು ರಾಜಕೀಯ ಮಾತಿಗೆಳೆದಳು."ನಮ್ಮವ್ನ ನಾಕ್‌ದಿನಾದ್ರ ಆಳ್ತನೆ" ಅಂದ್ಕೊಂಡಿದ್ದೆ. ರಾಂ ಪ್ರಧಾನಿಯಾದ್ರೆ ನಮ್ಗೆಲ್ಲ ಹಿಟ್ಟು-ಬಟ್ಟೆ ಸಿಕ್ಕಿದ ಅಂತ ಕೆಣಕಿದೆ. "ಏನಾರು ಆಗ್ಲಿ ನಮವ್ನ ಅಂತ ಯಾತ್ಕಾಯ್ತು. ಬೇರೋರೆಲ್ಲ ಆಳ್ಬೋದು, ಅವನ್ಯಾಕೆ ಆಳ್ಬಾರ್ದು?" ಏನಮ್ಮ ನಂ ಜನವೆಲ್ಲಾ ಇಂದ್ರಾಗಾಂಧಿ ಗೆದ್ದಿರೋದ್ಕೆ ಸಂತೋಷ ಪಡ್ತಾವ್ರಲ್ಲ? "ಇರೋಬ್ದು ಕಣಪ್ಪ ನಮ್ಮವನ್ಗಿಂತ ಹೆಚ್ಚ ಅವ್ಳ"

ಯಾರ್ಬಂದ್ರೂ ನಮ್ಮ ಸ್ಥಿತಿ ಹಿಂಗೆ ಇದೆ ಏನ್ ಮಾಡದ್ರೆ ನಮ್ಮ ಬಡಸ್ತನ ಹೋಯ್ತದೆ? ಎಂದು ಪ್ರಶ್ನಿಸಿದೆ.

ಗಡುಸಿನಿಂದ "ನೀಮೆಲ್ಲ ವಿದ್ಯಾವಂತ್ರಿದ್ದೀರಲ್ಲ ಹೋರಾಡ್ಬೇಕು" ಅಂತ ಒಂದೇ ಸಮನೆ ಕೆಕ್ಕರಿಸಿ ನೋಡಿದಳು.

—ಅನೂಪ

ಈ ಪತ್ರಿಕೆಯು ರಾಮದೇವ ರಾಕೆಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ. ಬೆಂಗಳೂರು-560002.